# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 1231/2021 ಸಿಡಬ್ಲೂ: 2 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 21-01-2026

ಹೆಸರು : ಪಾಂಡು

ತಂದೆ ಹೆಸರು : ದಶರಥ ಮದ್ನೆ

ವಯಸ್ಸು : 31 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 3 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಪೋಲೀಸರು ನಮ್ಮ ಸಮಕ್ಷಮ ಯಾವುದೇ ರೀತಿಯ ಪಂಚನಾಮೆಗಳು ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನಿ ಪಿ 1 ಕ್ಕೆ ದಾರಿಯಲ್ಲಿ ಬರುವಾಗ ಪೊಲೀಸರು ಸಹಿಯನ್ನು ಪಡೆದುಕೊಂಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿಃ03-04-2020 ರಂದು ನಾನು ಮತ್ತು ಚಾ ಸಾ 3 ರವರು ಸೇಡಂ ಬಸ್ಸು ನಿಲ್ದಾಣದ ಹತ್ತಿರ ನಿಂತಾಗ ಒಂದು ಸರ್ಕಾರಿ ವಾಹನ ಸಂಖ್ಯೆ ಕೆ ಎ 32 ಜಿ 0881 ಬಂದು ನಿಂತಿತ್ತು ಎಂದರೆ ಸರಿಯಿಲ್ಲ. ಸದರಿ ವಾಹನದಲ್ಲಿ ಸಮವಸ್ತ್ರದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದರು ಎಂದರೆ ಸರಿಯಿಲ್ಲ. ಸದರಿ ಅಧಿಕಾರಿಗಳು ನಮ್ಮನ್ನು ಹತ್ತಿರಕ್ಕೆ ಕರೆದು ರಂಜೋಳು ಗ್ರಾಮದಲ್ಲಿ ಕರೋನಾ ಭೀತಿಯಲ್ಲಿ ತಾಲೂಕಿನ ಎಲ್ಲಾ ಮಧ್ಯದ ಅಂಗಡಿಗಳು ಬಂದ್ ಮಾಡಿದ್ದರೂ ಸಹ ಅಲ್ಲಿ ಅನಧಿಕೃತವಾಗಿ ಮನೆಯಲ್ಲಿ

ಸ್ವದೇಶಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಬಾತಿಮಿ ಬಂದಿದೆ ಅದಕ್ಕೆ ಸ್ಥಳೀಯರು ಪಂಚರಾಗಲು ನಿರಾಕರಿಸಿದಲ್ಲಿ ನಮಗೆ ಪಂಚರಾಗಿ ಪಂಚನಾಮೆ ಜರುಗಿಸಲು ಕೋರಿದರು ಎಂದರೆ ಸರಿಯಿಲ್ಲ. ನಂತರ ಅದೇ ವಾಹನದಲ್ಲಿ ಕುಳಿತು ಸುಮಾರು 03-20 ಗಂಟೆಗೆ ಸೇಡಂ ನಿಂದ ಹೊರಟು 03-50 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿದ್ದೆವು ಎಂದರೆ ಸರಿಯಿಲ್ಲ. ಘಟನಾ ಸ್ಥಳಕ್ಕೆ ಹೋಗಿ ನನೋಡಲಾಗಿ ಅಲ್ಲಿ 4 ರಿಂದ 5 ಜನರು ಇದ್ದರು ಎಂದರೆ ಸರಿಯಿಲ್ಲ. ಅಲ್ಲಿರುವ ಜನ ಪಂಚರಾಗಲು ನಿರಾಕರಿಸಿರುವುದರಿಂದ ನಾನು ಮತ್ತು ಚಾ ಸಾ 3 ರವರು ಪಂಚರಾಗಲು ಒಪ್ಪಿ ಕೊಂಡಿದ್ದೇವೆ ಎಂದರೆ ಸರಿಯಿಲ್ಲ. ನಂತರ ಮನೆ ಶೋಧನೆ ಮಾಡಲು ಶೋದನಾ ಪತ್ರವನ್ನು ತಯಾರಿಸಿದ್ದೆವು ಎಂದರೆ ಸರಿಯಿಲ್ಲ. ನಂತರ ನಾವು ಮನೆಯಿಂದ ಯಾರು ಹೊರಗೆ ಕರೆದರೂ ಕೂಡ ಬರದೇ ಇರುವುದರಿಂದ ನಾವು ಮನೆಯಲ್ಲಿ ಹೋಗಿ ಪರಿಶೀಲಿಸಲಾಗಿ ಅಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಕ್ ಗೊಬ್ಬರದ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ ಓರಿಜಿನಲ್ ಚಾಯ್ಸ 90 ಮಿಲಿ ಅಳತೆಯ 72 ಟೆಟ್ರಾ ಪಾಕೇಟುಗಳು ಇದ್ದವು ಎಂದರೆ ಸರಿಯಿಲ್ಲ. ಸದರಿ ಮಧ್ಯವರನ್ನು ವಶಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಿಲ್ಲ. ನಂತರ ಮನೆಯ ಮಾಲಿಲೀಕರ ಬಗ್ಗೆ ವಿಚಾಯಣೆ ಮಾಡಲಾಗಿ ಆತನ ಹೆಸರು ಜಾನರ್ದನ ರೆಡ್ಡಿ ತಂದೆ ಮಲ್ಲಾ ರೆಡ್ಡಿ ಅಂತಾ ಗೊತ್ತಾಗಿತ್ತು ಎಂದರೆ ಸರಿಯಿಲ್ಲ. ನಂತರ ಅದರಲ್ಲಿ 90 ಎಂ ಎಲ್ ಬನ ಒಟ್ಟು 32 ಓರಿಜಿನಲ್ ಚಾಯ್ಸ ಟೆಟ್ರಾ ಪಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗಾರಿ ಮಾದರಿ ತೆಗೆದು ಇಲಾಖಾ ಮುದ್ರೆ ಸಂಖ್ಯೆ ಯಿಂದ ಸೀಲು ಮಾಡಲಾಯಿತು ಎಂದರೆ ಸರಿಯಿಲ್ಲ. ಸದರಿ ಪಂಚನಾಮೆಯನ್ನು ಸಂಜೆ 04-00 ರಿಂದ 05-00 ಗಂಟೆಯ ವೆರೆಗ ಬರೆದು ಮುಗಿಸಲಾಯಿತು ಎಂದರೆ ಸರಿಯಿಲ್ಲ. ಸಾಕ್ಷಿಗೆ 30 ಟೆಟ್ರಾ ಪಾಕೇಟುಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಲು ನಿರಾಕರಿಸಿರುವುದರಿಂದ ಅವುಗಳನ್ನು ಮು ಮಾ 1 ರಿಂದ 30 ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಭಾಗಿಯಾಗಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1231/2021 ಸಿಡಬ್ಲೂ: 3 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 21-01-2026

ಹೆಸರು : ಆಂಜನೇಯ

ತಂದೆ ಹೆಸರು : ಭೀಮಯ್ಯ ಕಲಾಲ್

ವಯಸ್ಸು : 39 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 2 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಪೋಲೀಸರು ನಮ್ಮ ಸಮಕ್ಷಮ ಯಾವುದೇ ರೀತಿಯ ಪಂಚನಾಮೆಗಳು ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನಿ ಪಿ 1 ಕ್ಕೆ ಕಛೇರಿಯಲ್ಲಿ ಸಹಿಯನ್ನು ಪಡೆದುಕೊಂಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ:

ದಿಃ03-04-2020 ರಂದು ನಾನು ಮತ್ತು ಚಾ ಸಾ 2 ರವರು ಸೇಡಂ ಬಸ್ಸು ನಿಲ್ದಾಣದ ಹತ್ತಿರ ನಿಂತಾಗ ಒಂದು ಸರ್ಕಾರಿ ವಾಹನ ಸಂಖ್ಯೆ ಕೆ ಎ 32 ಜಿ 0881 ಬಂದು ನಿಂತಿತ್ತು ಎಂದರೆ ಸರಿಯಿಲ್ಲ. ಸದರಿ ವಾಹನದಲ್ಲಿ ಸಮವಸ್ತ್ರದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದರು ಎಂದರೆ ಸರಿಯಿಲ್ಲ. ಸದರಿ ಅಧಿಕಾರಿಗಳು ನಮ್ಮನ್ನು ಹತ್ತಿರಕ್ಕೆ ಕರೆದು ರಂಜೋಳು ಗ್ರಾಮದಲ್ಲಿ ಕರೋನಾ ಭೀತಿಯಲ್ಲಿ ತಾಲೂಕಿನ ಎಲ್ಲಾ ಮಧ್ಯದ ಅಂಗಡಿಗಳು ಬಂದ್ ಮಾಡಿದ್ದರೂ ಸಹ ಅಲ್ಲಿ ಅನಧಿಕೃತವಾಗಿ ಮನೆಯಲ್ಲಿ ಸ್ವದೇಶಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಬಾತಿಮಿ ಬಂದಿದೆ ಅದಕ್ಕೆ ಸ್ವಳೀಯರು

ಪಂಚರಾಗಲು ನಿರಾಕರಿಸಿದಲ್ಲಿ ನಮಗೆ ಪಂಚರಾಗಿ ಪಂಚನಾಮೆ ಜರುಗಿಸಲು ಕೋರಿದರು ಎಂದರೆ ಸರಿಯಿಲ್ಲ. ನಂತರ ಅದೇ ವಾಹನದಲ್ಲಿ ಕುಳಿತು ಸುಮಾರು 03-20 ಗಂಟೆಗೆ ಸೇಡಂ ನಿಂದ ಹೊರಟು 03-50 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿದ್ದೆವು ಎಂದರೆ ಸರಿಯಿಲ್ಲ. ಘಟನಾ ಸ್ಥಳಕ್ಕೆ ಹೋಗಿ ನನೋಡಲಾಗಿ ಅಲ್ಲಿ 4 ರಿಂದ 5 ಜನರು ಇದ್ದರು ಎಂದರೆ ಸರಿಯಿಲ್ಲ. ಅಲ್ಲಿರುವ ಜನ ಪಂಚರಾಗಲು ನಿರಾಕರಿಸಿರುವುದರಿಂದ ನಾನು ಮತ್ತು ಚಾ ಸಾ 2 ರವರು ಪಂಚರಾಗಲು ಒಪ್ಪಿ ಕೊಂಡಿದ್ದೇವೆ ಎಂದರೆ ಸರಿಯಿಲ್ಲ.  ನಂತರ ಮನೆ ಶೋಧನೆ ಮಾಡಲು ಶೋದನಾ ಪತ್ರವನ್ನು ತಯಾರಿಸಿದ್ದೆವು ಎಂದರೆ ಸರಿಯಿಲ್ಲ. ನಂತರ ನಾವು ಮನೆಯಿಂದ ಯಾರು ಹೊರಗೆ ಕರೆದರೂ ಕೂಡ ಬರದೇ ಇರುವುದರಿಂದ ನಾವು ಮನೆಯಲ್ಲಿ ಹೋಗಿ ಪರಿಶೀಲಿಸಲಾಗಿ ಅಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಗೊಬ್ಬರದ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ ಓರಿಜಿನಲ್ ಚಾಯ್ಸ 90 ಮಿಲಿ ಅಳತೆಯ 72 ಟೆಟ್ರಾ ಪಾಕೇಟುಗಳು ಇದ್ದವು ಎಂದರೆ ಸರಿಯಿಲ್ಲ.  ಸದರಿ ಮದ್ಯವರನ್ನು ವಶಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಿಲ್ಲ. ನಂತರ ಮನೆಯ ಮಾಲಿಲೀಕರ ಬಗ್ಗೆ ವಿಚಾಯಣೆ ಮಾಡಲಾಗಿ ಆತನ ಹೆಸರು ಜಾನರ್ದನ ರೆಡ್ಡಿ ತಂದೆ ಮಲ್ಲಾ ರೆಡ್ಡಿ ಅಂತಾ ಗೊತ್ತಾಗಿತ್ತು ಎಂದರೆ ಸರಿಯಿಲ್ಲ.  ನಂತರ ಅದರಲ್ಲಿ 90 ಎಂ ಎಲ್ ಬನ ಒಟ್ಟು 32 ಓರಿಜಿನಲ್ ಚಾಯ್ಸ ಟೆಟ್ರಾ ಪಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗಾರಿ ಮಾದರಿ ತೆಗೆದು ಇಲಾಖಾ ಮುದ್ರೆ ಸಂಖ್ಯೆ ಯಿಂದ ಸೀಲು ಮಾಡಲಾಯಿತು ಎಂದರೆ ಸರಿಯಿಲ್ಲ. ಸದರಿ ಪಂಚನಾಮೆಯನ್ನು ಸಂಜೆ 04-00 ರಿಂದ 05-00 ಗಂಟೆಯ ವೆರೆಗ ಬರೆದು ಮುಗಿಸಲಾಯಿತು ಎಂದರೆ ಸರಿಯಿಲ್ಲ. ಸಾಕ್ಷಿಗೆ 30 ಟೆಟ್ರಾ ಪಾಕೇಟುಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಲು ನಿರಾಕರಿಸಿರುವುದರಿಂದ ಅವುಗಳನ್ನು ಈಗಾಗಲೇ ಮು ಮಾ 1 ರಿಂದ 30 ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಭಾಗಿಯಾಗಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

**ವಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1231/2021 ಸಿಡಬ್ಲೂ: 1 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 19-02-2026

ಹೆಸರು : ಲಕ್ಷ್ಮಣ್ ರಾಥೊಡ್

ತಂದೆ ಹೆಸರು : ಶಾಮು ರಾಥೋಡ್

ವಯಸ್ಸು : 65 ವರ್ಷ

ಉದ್ಯೋಗ : ನಿವೃತ್ತ ಅಬಕಾರಿ ಉಪನಿರೀಕ್ಷಕರು

ವಾಸಸ್ಥಳ : ಬೆಂಗಳೂರು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ಜನವರಿ 2020 ರಿಂದ ಡಿಸೆಂಬರ್ 2020 ರ ವರೆಗೆ ಅಬಕಾರಿ ನೀರಿಕ್ಷಕರ ಕಛೇರಿ ವಲಯ ಸೇಡಂ ದಲ್ಲಿ ಅಬಕಾರಿ ಉಪನಿರೀಕ್ಷಕರಾಗಿ ಸೇವೆಯನ್ನು ಸಲ್ಲಿಸಿರುತ್ತೇನೆ.

ಈ ಅವರಧಿಯಲ್ಲಿ ದಿಃ03-04-2020 ರಂದು ಸಮಯ ಮಧ್ಯಾಹ್ನ 03-10 ಗಂಟೆ ಸುಮಾರಿಗೆ ನಾನು ಕಛೇರಿಯಲ್ಲಿದ್ದಾಗ ರಂಜೊಳು ಗ್ರಾಮದಲ್ಲಿ ಕರೋನಾ ಭೀತಿಯಲ್ಲಿ ತಾಲೂಕಿನ ಎಲ್ಲಾ ಮಧ್ಯದ ಅಂಗಡಿಗಳು ಬಂದ್ ಮಾಡಿದ್ದರೂ ಸಹ ಅಲ್ಲಿ ಅನಧಿಕೃತವಾಗಿ ಮನೆಯಲ್ಲಿ ಸ್ವದೇಶಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಬಾತಿಮಿ ಬಂದಿತ್ತು. ಅದಕ್ಕೆ ಸ್ಥಳೀಯರು ಪಂಚರಾಗಲು ನಿರಾಕರಿಸಿದಲ್ಲಿ ಪಂಚನಾಮೆ ಜರುಗಿಸಲು ಚಾ ಸಾ 2 ಮತ್ತು 3 ರವರಿಗೆ ಬರಮಾಡಿಕೊಂಡು ಹಾಗೂ ನಮ್ಮ ಕಛೇರಿಯ ಸಿಬ್ಬಂದಿಯಾದ ಚಾ ಸಾ 6 ಮತ್ತು8 ರವರಿಗೆ ತಿಳಿಸಿ ನಮ್ಮ ಇಲಾಖೆಯ ಸರ್ಕಾರಿ ವಾಹನ ಸಂಖ್ಯೆ ಕೆ ಎ 32 ಜಿ 0881 ವಾಹನದಲ್ಲಿ ಕುಳಿತು ಸುಮಾರು 03-20 ಗಂಟೆಗೆ ಸೇಡಂ ನಿಂದ ಹೊರಟು 03-50 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿದ್ದೆವು. ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ 4 ರಿಂದ 5 ಜನರು ಇದ್ದರು. ಅಲ್ಲಿರುವ ಜನ ಪಂಚರಾಗಲು ನಿರಾಕರಿಸಿರುವುದರಿಂದ ಚಾ ಸಾ 2 ಮತ್ತು 3 ರವರು ಪಂಚರಾಗಲು ಒಪ್ಪಿ ಕೊಂಡಿದ್ದರು. ನಂತರ ಮನೆ ಶೋಧನೆ ಮಾಡಲು ಶೋದನಾ ಪತ್ರವನ್ನು ತಯಾರಿಸಿದ್ದೆವು. ನಂತರ ನಾವು ಮನೆಯಿಂದ ಯಾರು ಹೊರಗೆ ಕರೆದರೂ ಕೂಡ ಬರದೇ ಇರುವುದರಿಂದ ನಾವು ಮನೆಯಲ್ಲಿ ಹೋಗಿ ಪರಿಶೀಲಿಸಲಾಗಿ ಅಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಕ್ ಗೊಬ್ಬರದ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ ಓರಿಜಿನಲ್

ಚಾಯ್ಸ 90 ಮಿಲಿ ಅಳತೆಯ 72 ಟೆಟ್ರಾ ಪಾಕೇಟುಗಳು ದೊರೆಯಿತು. ಸದರಿ ಮದ್ಯವರನ್ನು ವಶಕ್ಕೆ ಪಡೆದುಕೊಂಡಿದ್ದರು. ನಂತರ ಮನೆಯ ಮಾಲಿಲೀಕರ ಬಗ್ಗೆ ವಿಚಾಯಣೆ ಮಾಡಲಾಗಿ ಆತನ ಹೆಸರು ಜಾನರ್ದನ ರೆಡ್ಡಿ ತಂದೆ ಮಲ್ಲಾ ರೆಡ್ಡಿ ಅಂತಾ ಗೊತ್ತಾಗಿತ್ತು. ನಂತರ ಅದರಲ್ಲಿ 90 ಎಂ ಎಲ್ ನ ಒಟ್ಟು 30 ಓರಿಜಿನಲ್ ಚಾಯ್ಸ ಟೆಟ್ರಾ ಪಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಇಲಾಖಾ ಮುದ್ರೆ ಸಂಖ್ಯೆ ಯಿಂದ ಸೀಲು ಮಾಡಲಾಯಿತು. ಸದರಿ ಪಂಚನಾಮೆಯನ್ನು ಸಂಜೆ 04-00 ರಿಂದ 05-00 ಗಂಟೆಯ ವೆರೆಗ ಬರೆದು ಮುಗಿಸಲಾಯಿತು. ಸಾಕ್ಷಿಗೆ 30 ಟೆಟ್ರಾ ಪಾಕೇಟುಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು ಮಾ 1 ರಿಂದ 30 ಎಂದು ಗುರುತಿಸಲಾಗಿದೆ. ಸಾಕ್ಷಿಯು ಆರೋಪಿಗೆ ನೋಡಿ ಗುರುತಿಸಲು ನಿರಾಕರಿಸಿರುತ್ತಾರೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಈಗ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1 (ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ಶೋಧನಾ ಪತ್ರ ವನ್ನು ನೋಡಿ ಈಗ ಗುರುತಿಸಿದ್ದು ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2 (ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸರ್ಕಾರದ ತರ್ಪೆಯನ್ನು ನೋಡಿ ಈಗ ಗುರುತಿಸಿದ್ದು ಅದನ್ನು ನಿ ಪಿ 3 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 3 (ಎ) ಎಂದು ಗುರುತಿಸಲಾಯಿತು. ಅದೇ ರೀತಿ ಮಾದರಿ ಸೀಲನ್ನು ನೋಡಿ ಈಗ ಗುರುತಿಸಿದ್ದು ಅದನ್ನು ನಿ ಪಿ 4 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4 (ಎ) ಎಂದು ಗುರುತಿಸಲಾಯಿತು. ಅದೇ ರೀತಿ ಪ್ರ ವ ವರದಿಯನ್ನು ನೋಡಿ ಈಗ ಗುರುತಿಸಿದ್ದು ಅದನ್ನು ನಿ ಪಿ 5 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 5 (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ರಂಜೋಳು ಗ್ರಾಮದಲ್ಲಿ ಸುಮಾರು 500 ರಿಂದ 600 ಮನೆಗಳು ಇವೆ ಎಂದರೆ ಸರಿ. ಆರೋಪಿತನ ಮನೆ ಊರಿನ ಮಧ್ಯಭಾಗದಲ್ಲಿ ಇದೆ ಎಂದರೆ ಸರಿ. ಆರೋಪಿತನ ಮನೆಯ ಅಕ್ಕ ಪಕ್ಕದಲ್ಲಿ ಬಹಳಷ್ಟು ಹೊಟೇಲುಗಳು ಇವೆ ಎಂದರೆ ಸರಿ. ಪಂಚರಿಗೆ ಬಿಟ್ಟು ಬೇರೆ ಜನರ ಹೇಳಿಕೆ ಪಡೆದುಕೊಂಡಿಲ್ಲ. ಪಂಚರಿಗೆ ಯಾವುದೇ ನೋಟೀಸು ಕೊಟ್ಟಿಲ್ಲ ಮೌಖಿಕವಾಗಿ ಬರಮಾಡಿಕೊಂಡಿರುತ್ತೇನೆ. ಮು ಮಾ 1 ರಿಂದ 30 ಸಾಮಾನ್ಯವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಲಭ್ಯವಿರುತ್ತದೆ ಎಂದರೆ ಸಾಕ್ಷಿಯು ಆಗ ಕರೋನಾ ಮಹಾ ಮಾರಿಯಿಂದ ಎಲ್ಲಾ ಅಂಗಡಿಗಳು ಬಂದ್

ಇದ್ದವು ಎಂದು ನುಡಿಯುತ್ತಾರೆ. ನಾನು ಯಾವುದೇ ದಾಳಿ ಮಾಡಿಲ್ಲ ಯಾವುದೇ ಮು ಮಾ ನ್ನು ವಶಕ್ಕೆ ಪಡೆದುಕೊಂಡಿಲ್ಲ. ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿಗೂ ಮು ಮಾ ಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**